**ಮಹಾರಾಜ್:** ಶ್ರವಣ–ಮನನಗಳ ನಂತರವೇ ನಿಧಿಧ್ಯಾಸನ. ಶ್ರವಣ–ಮನನ ಮಾಡಿದ್ದರಿಂದಲೇ ನಿದಿಧ್ಯಾಸನವುಂಟಾಗುವುದು.

**ಪ್ರಶ್ನೆ:** ಇಲ್ಲ; ಒಂದು ವೇಳೆ ಜ್ಞಾನನಿಷ್ಠೆ ಬರುವ ತನಕ ಕರ್ಮ ಮಾಡುತ್ತ ಹೋಗುತ್ತೇವೆ. ನಿಷ್ಕಾಮಕರ್ಮದ ಜೊತೆಗೆ ಸಾಧಾರಣ ವಾಗಿ ನಾವು ತಿಳಿಯುವಂತೆ ಜ್ಞಾನದ ಅಂತರಂಗ ಸಾಧನೆ – ಶ್ರವಣ, ಮನನ, ನಿದಿಧ್ಯಾಸನ – ಮಾಡಬೇಕಾಗುತ್ತದೆಯೆ?

**ಮಹಾರಾಜ್:** ನಿಷ್ಠೆ ಎಂದರೆ 'ನಿತರಾಂ ಸ್ಥಿತಿ.' ನಿಷ್ಠೆ ಎಂದರೆ ದೃಢತೆ ಅಲ್ಲ, ನಿಷ್ಠೆ ಎಂದರೆ – ಆ ಸ್ಥಿತಿಯಲ್ಲಿರುವುದು. ಜ್ಞಾನದ ಸ್ಥಿತಿ ಉಂಟಾದಾಗ ಪ್ರಜ್ಞೆಯು ಪ್ರತಿಷ್ಠಿತವಾಗುತ್ತದೆ. ಪ್ರಜ್ಞೆ ಯಾವಾಗ ಪ್ರತಿಷ್ಠಿತವಾಯಿತೋ ಅದೇ ಧ್ಯಾನದ ಸ್ಥಿತಿ. ಆಗ ಅಲ್ಲಿ ಕರ್ಮ ದೊಂದಿಗೆ ವಿರೋಧವಿರುತ್ತದೆ. ಅಲ್ಲಿಯ ತನಕ ಕರ್ಮ ವಿರೋಧ ವಿರುವುದಿಲ್ಲ. ಇದು ನನ್ನ ಅಭಿಪ್ರಾಯ. ಆದ್ದರಿಂದ ಸ್ವಾಮೀಜಿ ದೃಷ್ಟಿಯಲ್ಲಿ ಕರ್ಮ ಮತ್ತು ಧ್ಯಾನ ಇವುಗಳು ಪರಸ್ಪರ ವಿರೋಧ ವಸ್ತುಗಳಲ್ಲ. ಆದರೂ, ಕರ್ಮವನ್ನು ಸರಿಯಾದ ರೀತಿಯಲ್ಲಿ ಮಾಡಿದರೆ, ಆ ಕರ್ಮದ ಮೂಲಕ ಸಾಧನಾಪಥದಲ್ಲಿ ಮುಂದು ವರಿಯಲು ಯಾವುದೇ ತೊಂದರೆಯಿಲ್ಲ. ಕರ್ಮದೊಂದಿಗೆ ವಿಚಾರವನ್ನೂ ಸೇರಿಸಿಕೊಂಡರೆ, ಗುರಿಯನ್ನು ಮರೆಯದಿದ್ದರೆ ಯಾವುದೇ ತೊಂದರೆಯುಂಟಾಗದು.

**ಪ್ರಶ್ನೆ:** ಆಚಾರ್ಯ ಶಂಕರರು ಚಿತ್ತಶುದ್ಧಿಯ ವಿಚಾರ ಹೇಳುತ್ತಾರೆ.

**ಮಹಾರಾಜ್:** ಆಚಾರ್ಯರು ಚಿತ್ತಶುದ್ಧಿಯಿಂದಲೇ ಆರಂಭಿಸು ತ್ತಾರೆ. ಪ್ರತ್ಯೇಕವಾಗಿ ಬ್ರಹ್ಮಾಕಾರ ವೃತ್ತಿಯ ಉದಯವಾಗುವ ಆವಶ್ಯಕತೆಯಿಲ್ಲವೆಂದು ಸ್ವಾಮೀಜಿ ಹೇಳುತ್ತಾರೆ. ಚಿತ್ತಶುದ್ಧಿ ಯುಂಟಾಯಿತೆಂದರೆ ಬ್ರಹ್ಮಾಕಾರವೃತ್ತಿಯ ಅಗತ್ಯವೇನಿದೆ? ಚಿತ್ತ ಶುದ್ಧಿಯೆಂದರೆ, ಚಿತ್ತ ಅಥವಾ ನಮ್ಮ ಜ್ಞಾನವನ್ನು ಕವಿದಿರುವ ಆವರಣವಿದೆಯಲ್ಲ, ಅದು ಶುದ್ಧವಾಯಿತೆಂದರೆ ಎಲ್ಲ ಆದಂತೆ. ಆತ್ಮವು ಸ್ವಯಂಪ್ರಕಾಶ – ತಾನಾಗಿಯೇ ಪ್ರಕಾಶಿಸುವಂಥದ್ದು.

**ಪ್ರಶ್ನೆ:** ಚಿತ್ತಶುದ್ಧವಾದರೆ ಆದ ಹಾಗೆಯೆ? ಅಂದರೆ ಬ್ರಹ್ಮಾಕಾರ ವೃತ್ತಿಯ ಆವಶ್ಯಕತೆಯಿಲ್ಲವೆ?

**ಮಹಾರಾಜ್:** ಮತ್ತೇನು ವೃತ್ತಿ? ವೃತ್ತಿಯ ಮೂಲಕ ಬ್ರಹ್ಮಜ್ಞಾನ ವನ್ನು ಪ್ರಕಾಶಪಡಿಸಲಾದೀತೆ? ಬ್ರಹ್ಮವು ಸ್ವಯಂ ಪ್ರಕಾಶವಾದುದು.

**ಪ್ರಶ್ನೆ:** ಅದೇ ಚಿತ್ತ ಹಾಗೆಯೇ ಉಳಿದುಹೋಗುವುದಲ್ಲವೆ? ಚಿತ್ತವನ್ನು ನಾಶಪಡಿಸಬೇಕಲ್ಲವೆ?

**ಮಹಾರಾಜ್:** ಚಿತ್ತವು ಹಾಗೆಯೇ ಉಳಿದು ಹೋಯಿತೆಂದರೆ ಅರ್ಥವೇನು? ಶುದ್ಧಮನಸ್ಸು, ಶುದ್ಧಬುದ್ಧಿ, ಶುದ್ಧ ಆತ್ಮ ಒಂದೇ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಈ ಮಾತಿನಲ್ಲ ಕಿಂಚಿತ್ತೂ ಕಳಂಕವಿಲ್ಲ. ಯಾವಾಗ ಚಿತ್ತಶುದ್ಧಿಯಾಯಿತೋ ಆಗ ಆವರಣ ಕಳಚಿ ಬೀಳುತ್ತದೆ. ಅಲ್ಲಿ ನಾಶಮಾಡಲು ಏನೂ ಉಳಿಯದು. ಆಗ ಸೃಷ್ಟಿಯ ಎಲ್ಲ ಅಡೆತಡೆಗಳೂ ಇಲ್ಲವಾಗುತ್ತವೆ.

**ಪ್ರಶ್ನೆ:** ಹಾಗಾದರೆ, ಜ್ಞಾನ ಮತ್ತು ಕರ್ಮಗಳ ಸಮುಚ್ಚಯಗಳ ಸಂಬಂಧವಾಗಿ ಶಂಕರಾಚಾರ್ಯರು, ಆಗಾಗ ಹೇಳುತ್ತಾರಲ್ಲ? ಇಲ್ಲಿ ಅದು ಸಾಧ್ಯವಾಗದು.

**ಮಹಾರಾಜ್:** ಅಲ್ಲಿ ಕರ್ಮವೆಂದರೆ ಸಕಾಮಕರ್ಮ.

**ಪ್ರಶ್ನೆ:** ಹಾಗಾದರೆ ನಿಷ್ಕಾಮದ ಕ್ಷೇತ್ರದಲ್ಲಿ ಅದಕ್ಕೆ ವಿರೋಧವಿಲ್ಲವೆ?

**ಮಹಾರಾಜ್:** ಅದಕ್ಕೆ ಯಾವ ವಿರೋದವೂ ಇಲ್ಲ. ನಿಷ್ಕಾಮ ಕರ್ಮವು ಜ್ಞಾನಕ್ಕೆ ಸಹಕಾರಿ. ವಿರೋಧವೆಲ್ಲಿ ಉಂಟಾಗುವುದು? ಸಕಾಮಕರ್ಮದ ಅವಸ್ಥೆಯಲ್ಲಿದ್ದಾಗ, ನಿದಿಧ್ಯಾಸನದೊಂದಿಗೆ ಅದಕ್ಕೆ ವಿರೋಧವಿದೆಯೆಂದು ಹೇಳಲಾಗಿದೆ. 'ಈಗ ನನಗೆ ಈ ಕೆಲಸವನ್ನು ಮಾಡಬೇಕಾಗಿದೆ' ಎಂದು ನೀನು ಭಾವಿಸಿದರೆ ಅದನ್ನು ಮಾಡಲೇಬೇಕು. ಹೀಗೆ ಮಾಡಿದರೆ ನಿನಗೆ ಜ್ಞಾನನಿಷ್ಠೆಯಿರದು. ನೀನು ಐಚ್ಛಿಕ ಭಾವದಲ್ಲಿ (ನಿನ್ನ ಇಚ್ಛೆಯಂತೆ) ಇರಬೇಕಾಗುವುದು. ಇನ್ನೊಂದು ವಿಚಾರ, ಜ್ಞಾನಾವಸ್ಥೆಯಲ್ಲಿ ಸಕಾಮಕರ್ಮವೇ ಏಕೆ, ನಿಷ್ಕಾಮಕರ್ಮದ ಅನುಷ್ಠಾನವೂ ಸಾಧ್ಯವಿಲ್ಲ. ಈ ಅರ್ಥದಲ್ಲೇ ಜ್ಞಾನ–ಕರ್ಮ ಸಮುಚ್ಚಯ ಸಾಧ್ಯವಿಲ್ಲವೆಂದು ಶ್ರೀಶಂಕರರು ಹೇಳುತ್ತಾರೆ.

**ಪ್ರಶ್ನೆ:** ಮಹಾರಾಜ್, ನಾವು ಕರ್ಮದಲ್ಲಿ ಪರಿಣತವಾದ ವೇದಾಂತದ ಮಾರ್ಗವನ್ನು ಅನುಸರಿಸಲು ಪ್ರಯತ್ನ ಪಡುತ್ತಿದ್ದೇವೆ. ತುಸು ಸಾಧನೆ–ಭಜನೆ ಮಾಡುತ್ತ, ಕರ್ಮವನ್ನೇ ಹೆಚ್ಚಾಗಿ ಮಾಡುತ್ತಿದ್ದೇವೆ. ಈ ದಾರಿಯನ್ನೇ ಅವಲಂಬಿಸಿ ಉಳಿದ ಸಮಯ ವನ್ನೆಲ್ಲ ಕಳೆಯುತ್ತಿದ್ದೇವೆ. ಸಂಸ್ಥೆಯ ದೃಷ್ಟಿಯಿಂದ ಉಳಿದವ ರೊಂದಿಗೆ ಹೋಲಿಸಿ ನೋಡಿದಾಗ, ನಾವು ಉತ್ತಮವಾಗಿದ್ದೇವೆ ಎನ್ನಬಹುದು. ಆದರೆ ವೈಯಕ್ತಿಕವಾಗಿ ನಾವು ಏನು success ಅಥವಾ ತೃಪ್ತಿಯನ್ನು ಹೊಂದಬೇಕಾಗಿತ್ತೋ ಅದನ್ನು ಸರಿಯಾದ ರೀತಿಯಲ್ಲಿ ಹೊಂದುತ್ತಿಲ್ಲ.

**ಮಹಾರಾಜ್:** ಅದಕ್ಕೇನು ಮಾಡಬೇಕು? ನಾವು ಅನುಷ್ಠಾನ ಮಾಡುತ್ತಿದ್ದೇವೆ. ಅದನ್ನು sincerely ಮಾಡಬೇಕು. ನಾವು ಜನರ ಮುಂದೆ ತೋರಿಸಿಕೊಳ್ಳಲು ಮಾಡುತ್ತಿಲ್ಲ. ಅದನ್ನು ಆಂತರಿಕ ಭಾವದಿಂದ ಮಾಡಬೇಕು. **'ಹರಿ ಸೇ ಲಾಗಿ ರಹೋ ರೇ ಭಾಯಿ, ತೇರಾ ಬನತ ಬನತ ಬನಿ ಜಾಯಿ'** (ಹರಿಯಲ್ಲೇ ಮನಸ್ಸನ್ನಿಟ್ಟು ಮಾಡು, ನಿಧಾನವಾಗಿ ನೀನು ಗುರಿ ತಲುಪುವೆ.) ನಾವು ಇದನ್ನೇ ಮಾಡುತ್ತೇವೆ. ಹೀಗಾಗಿ ಏನೂ ಸಾಧ್ಯವಾಗುತ್ತಿಲ್ಲ. ಒಂದೆರಡು ಹೆಜ್ಜೆ ಮುಂದಿಟ್ಟರೆ ಏನೂ ತಿಳಿಯದು. ನಾವು ಸೂರ್ಯನ ಕಡೆಗೆ ನಡೆಯುವಾಗ, ಒಂದು ಹೆಜ್ಜೆ ಮುಂದಿಟ್ಟರೂ, ಅಷ್ಟು ಹತ್ತಿರ ಹೋದ ಹಾಗೆ. ಆದರೆ ಅತ್ತ ಸಾಗುತ್ತಿದ್ದೇವೆಂದು ನಮಗೆ ತಿಳಿಯುವುದೆ?

# ಯೋಗವಾಸಿಷ್ಠದ ಕಥೆಗಳು



**ಸ್ವಾಮಿ ವೀರೇಶಾನಂದ**

**ಕಥಾಗುಚ್ಛ – ೩**

*(ಹಿಂದಿನ ಸಂಚಿಕೆಯಿಂದ)*

## ಮಹಾತ್ಮನ ಕಥೆ

ಚೈತನ್ಯದ ಅಂತರಾಳದಲ್ಲಿ, ಸೃಷ್ಟಿಕರ್ತನ ಮನದ ಮೂಲೆಯೊಂದರಲ್ಲಿ ಪಾಳುಬಿದ್ದ ದೇಗುಲವೊಂದಿತ್ತು. ಅದಕ್ಕೊಂದು ನೀಲಿ ಬಣ್ಣದ ಗೋಪುರ. ಹದಿನಾಲ್ಕು ಲೋಕಗಳೇ ಅದರ ಹದಿನಾಲ್ಕು ಕೊಠಡಿಗಳು. ಆಕಾಶದ ಮೂರು ಪರಿಗಳೇ (ಭೌತಿಕ, ಮಾನಸಿಕ, ಚೈತನ್ಯಾತ್ಮಕ) ಅದರಲ್ಲಿನ ರಂಧ್ರಗಳು. ಸೂರ್ಯನೇ ಬೆಳಕು. ಅದರಲ್ಲಿ ಸಣ್ಣ ಸಣ್ಣ ಹುತ್ತಗಳು; ಅವುಗಳೇ ನಗರಗಳು. ಹಾಗೆಯೇ ಸಣ್ಣ ಸಣ್ಣ ಹೊಂಡಗಳು; ಅವುಗಳೇ ಸಾಗರಗಳು. ಇದೇ ಸೃಷ್ಟಿ; ಇದೇ ವಿಶ್ವ. ಇದರ ಒಂದು ಸಣ್ಣ ಮೂಲೆಯಲ್ಲಿ ಒಬ್ಬ ಋಷಿಯು ತನ್ನ ಹೆಂಡತಿ ಮತ್ತು ಮಕ್ಕಳೊಡನೆ ಜೀವಿಸುತ್ತಿರುವನು. ಒಮ್ಮೆ ಆ ಮಹಾತ್ಮನು ಗುಡ್ಡವೊಂದರ ತಪ್ಪಲಲ್ಲಿ ಕುಳಿತಿದ್ದಾನೆ. ಅವನ ಮುಂದೆ ರಸ್ತೆಯಲ್ಲಿ ರಾಜನೊಬ್ಬನ ಮೆರವಣಿಗೆ ಸಾಗುತ್ತಿದೆ. ರಾಜನು ಆನೆಯ ಮೇಲೆ ವಿರಾಜಮಾನನಾಗಿದ್ದಾನೆ. ಅವನ ಹಿಂದೆ ಸೈನ್ಯ ಮತ್ತು ಸುತ್ತಮುತ್ತ ರಾಜಚಿಹ್ನೆಗಳ ಭವ್ಯ ಪ್ರದರ್ಶನ ಸಾಗುತ್ತಿದೆ. ಇದನ್ನು ನೋಡಿದ ಋಷಿಯ ಮನಸ್ಸಿನಲ್ಲಿ ಒಂದು ಆಶೆ ಮೂಡಿತು: ಆಹಾ! ರಾಜನ ಜೀವನ ಸಂಪದ್ಭರಿತವಾದದ್ದು; ಮೋದಾಮೋದಗಳಿಂದ ಕೂಡಿದ್ದು. ನನಗೂ ಇಂಥ ಭವ್ಯ ಆನೆಯ ಮೇಲೆ ರಾಜಗಾಂಭೀರ್ಯದಿಂದ ಕುಳಿತು ಸಾಗಲು ಸಾಧ್ಯವಾದರೆ! ನನ್ನ ಹಿಂದೆ ಸೈನ್ಯವು ಹಿಂಬಾಲಿಸುತ್ತಿದ್ದರೆ!

ಕೆಲವು ಸಮಯದ ನಂತರ ಆ ಋಷಿಯು ವೃದ್ಧನಾಗಿ ಮರಣವನ್ನಪ್ಪಿದನು. ಆತನ ಹೆಂಡತಿಯು ನನ್ನನ್ನು (ಸರಸ್ವತಿ) ಬಹುವಾಗಿ ಪ್ರಾರ್ಥಿಸಿಕೊಂಡಳು. ನೀನು ಕೇಳಿದ ವರವನ್ನೇ ಅವಳೂ ಕೇಳಿದಳು. ಆ ಮನೆಯ ಆಚೆಗೆ ಗಂಡನ ಜೀವವು ಹೋಗಬಾರದೆಂದು ಬೇಡಿಕೊಂಡಳು. ನಾನು ವರವನ್ನು ನೀಡಿದೆ.

ಆ ಸಂತನು ಹಿಂದಿನ ಜನ್ಮದ ಆಶೆಯ ಫಲವಾಗಿ ಬಹು ದೊಡ್ಡ ರಾಜನಾಗಿ ಹುಟ್ಟಿದನು. ಬೃಹತ್ ರಾಜ್ಯವನ್ನು ಆಳಿದನು. ಶತ್ರುಗಳಿಗೆ ಅವನು ಯಮನಂತೆ ಇದ್ದನು. ಪರ್ವತದಂತೆ ಸ್ಥಿರನಾಗಿದ್ದನು. ಸಂತರಿಗೆ ಆಶ್ರಯ ನೀಡುತ್ತಿದ್ದನು. ಅವನ ಹಿಂದಿನ ಜನ್ಮದ ಹೆಂಡತಿಯೂ ಅವನೊಡನೆ ಪುನಃ ಹುಟ್ಟಿದ್ದಳು. ರಾಣಿಯಾಗಿ ಅವನೊಡನೆ ಉಲ್ಲಾಸದಿಂದಿದ್ದಳು. ಕಡೆಗೆ ರಾಜನು ದೇಹತ್ಯಾಗ ಮಾಡಿದನು. ಇದೆಲ್ಲ ನಡೆಯುವುದಕ್ಕೆ ಎಷ್ಟು ಕಾಲ ತೆಗೆದುಕೊಂಡಿತೆಂದು ಕೇಳುವೆಯೊ? ಆ ಮಹಾತ್ಮನು ಕಾಲವಾಗಿ ಎಂಟು ದಿನಗಳ ಕಾಲ ಮಾತ್ರ!

ಲೀಲೆ, ಆ ಸಂತನು ಯಾರೆಂದುಕೊಂಡೆ? ನಿನ್ನ ಗಂಡನೇ. ಅವನ ಹೆಂಡತಿ ಯಾರೆಂದುಕೊಂಡೆ? ಅದು ನೀನೇ. ರಾಜನಾದ ನಿನ್ನ ಗಂಡ ಮತ್ತೆ ಸತ್ತಿದ್ದಾನೆ. ನೀನೀಗ ಮತ್ತೆ ಅಳುತ್ತಿದ್ದೀಯೆ. ಇವೆಲ್ಲ ಸಂಗತಿಗಳು ಅಜ್ಞಾನ ಮತ್ತು ಮೋಹಗಳ ಫಲವಾಗಿ ಅನಂತವಾದ ಚೈತನ್ಯದಲ್ಲಿ ತೋರುತ್ತಿವೆ, ಅಷ್ಟೇ. ಇದನ್ನು ನಿಜವೆಂದು ಭಾವಿಸುವೆಯೊ? ಅದೂ ಸರಿಯೇ. ಸುಳ್ಳೆಂದು ಭಾವಿಸುವೆಯೋ? ಅದು ಸರಿಯೇ. ಇದು ಹೀಗೇ ಎಂದು ಹೇಳಲು ಯಾರಿಗೂ ಸಾಧ್ಯವಿಲ್ಲ.

**ಲೀಲಾ:** ನಾನು ಮತ್ತು ನನ್ನ ಗಂಡ ಅದೆಷ್ಟು ವರ್ಷಗಳ ಕಾಲ ಬಾಳಿದೆವು! ನೀನು ಬರೀ ಎಂಟು ದಿನಗಳ ಕಾಲ ಮಾತ್ರ ಎನ್ನುತ್ತೀಯಲ್ಲ?

**ಸರಸ್ವತಿ:** ಅಮ್ಮಾ, ಲೀಲಾ. ಕಾಲ, ದೇಶ ಇವೆಲ್ಲ ಅನಂತ ಚೈತನ್ಯಕ್ಕೆ ಹೋಲಿಸಿದಲ್ಲಿ ಕೇವಲ ತೋರಿಕೆಗಳು ಮಾತ್ರ. ಅವುಗಳಿಗೆ ಯಾವ ನಿರ್ದಿಷ್ಟ ಗಡುವು ಎಂಬುದಿಲ್ಲ. ಕಣ್ಣು ಬಿಡುವಷ್ಟರಲ್ಲಿ ಜೀವವು ಮೃತ್ಯುವಿನ ಅನುಭವವನ್ನು ಪಡೆಯುತ್ತದೆ. ತನ್ನ ಹಿಂದಿನ ದಶೆಯನ್ನು ಮರೆತು, 'ನಾನು ಇಂಥವನು', 'ನಾನು ಇಂಥವನ ಮಗ', 'ನನಗೆ ಇಷ್ಟು ವಯಸ್ಸು' ಎಂದೆಲ್ಲ ಯೋಚಿಸುತ್ತದೆ. ಈ ಲೋಕದ ಅನುಭವಕ್ಕೂ, ಪರಲೋಕದ ಅನುಭವಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಅವೆಲ್ಲವೂ ಹಿಂದೆಯೇ ಹೇಳಿದ ಹಾಗೆ, ಅನಂತ ಚೈತನ್ಯದ ಮೇಲ್ಮೆಯಲ್ಲಿ ಮೂಡಿಬರುವ ಚಿತ್ತವೃತ್ತಿಗಳಷ್ಟೇ. ಚೈತನ್ಯವೊಂದೇ ಸತ್ಯ. ಅದರ ಮೇಲೆ ಆರೋಪಿತವಾದ ಮಾನಸಿಕ ವೃತ್ತಿಗಳೆಲ್ಲ ಬರಿಯ ಭ್ರಮೆ ಮಾತ್ರ.

**ಲೀಲಾ:** ದೇವಿ, ನೀನು ನನಗೆ ಎಂಥೆಂಥ ಅನುಭವಗಳನ್ನು ಮಾಡಿಸಿದ್ದೀಯೆ. ನನಗೆ ಆ ಮಹಾತ್ಮನ ತಪೋವನವನ್ನು ತೋರಿಸುವೆಯಾ?

**ಸರಸ್ವತಿ:** ಲೀಲಾ, ಇದು ಉತ್ಕಟ ಸಾಧನೆಯಿಂದ ಮಾತ್ರ ಸಾಧ್ಯ. ಈ ದೇಹದಿಂದ ಅಲ್ಲಿಗೆ ಹೋಗಲು ಸಾಧ್ಯವಿಲ್ಲ. ಅದಕ್ಕಾಗಿ ನೀನು ಚೈತನ್ಯಕಾಯವನ್ನು ಪಡೆಯಬೇಕು. ನೀನು ನನ್ನೊಡನೆ ಧ್ಯಾನ ಮಾಡಿ, ಈ ದೇಹ ಬಂಧನವನ್ನು ಮೀರಿಹೋಗು.

ಲೀಲಾ ಧ್ಯಾನಮಗ್ನಳಾದಳು. ಸರಸ್ವತಿಯೂ ಧ್ಯಾನಮಗ್ನಳಾದಳು. ಇಬ್ಬರೂ ಜ್ಞಾನಕಾಯವನ್ನು ಪಡೆದರು. ಪ್ರಜ್ಞೆಯ ಅನೇಕ ಆಯಾಮಗಳಲ್ಲಿ ನೆಲೆನಿಂತಿರುವ ಅನೇಕ ಲೋಕಗಳಲ್ಲಿ ಸುತ್ತಾಡಿದರು. ಹಲವಾರು ದೇವತೆಗಳನ್ನೂ, ಅವರ ಧಾಮಗಳನ್ನೂ ಕಂಡರು.

ಕಡೆಗೆ ಆ ಸಂತನ ಮನೆಯನ್ನು ಪ್ರವೇಶಿಸಿದರು. ಇಡೀ ಕುಟುಂಬ ಶೋಕದಲ್ಲಿ ಮುಳುಗಿತ್ತು. ಲೀಲಾ ಮತ್ತು ಸರಸ್ವತಿ ಸಾಧಾರಣ ಸ್ತ್ರೀಯರ ವೇಷವನ್ನು ಧರಿಸಿದರು. ಮನೆಯವರ ಹತ್ತಿರ ಮಾತನಾಡಿ, ಅವರನ್ನು ಸಾಂತ್ವನಗೊಳಿಸಿದರು. ಕಡೆಗೆ ತಮ್ಮ ಮೂಲನೆಲೆಗೆ ವಾಪಸ್ಸು ಬಂದರು.

ಆಶ್ಚರ್ಯವೋ ಆಶ್ಚರ್ಯ. ಲೀಲೆಯಾಗಲಿ, ಸರಸ್ವತಿಯಾಗಲಿ ನಿಜವಾಗಿಯೂ ಎಲ್ಲೂ ಹೋಗಿರಲಿಲ್ಲ. ಅವರ ಭೌತಿಕ ದೇಹಗಳು ಅರಮನೆಯಲ್ಲಿಯೇ ಇದ್ದವು. ಅವರ ಸೂಕ್ಷ್ಮದೇಹಗಳು ಮಾತ್ರವೇ ಹಲವಾರು ಲೋಕಗಳನ್ನು ಹಾಯ್ದು, ಬಗೆಬಗೆಯ ಅನುಭವಗಳನ್ನು ಪಡೆದು ಬಂದಿದ್ದವು. ಲೀಲೆಯ ಮನಸ್ಸಿನಲ್ಲಿ ಅನೇಕ ಸಂದೇಹಗಳು ಉದ್ಭವಿಸಿದವು. ''ರಾಜನ ವೇಷದಲ್ಲಿದ್ದ ನನ್ನ ಗಂಡನನ್ನು ನಾನು ಕಂಡರೂ ಅವನು ನನ್ನನ್ನು ಕಾಣಲಿಲ್ಲ; ಅದೇ ಸಂತನ ಮನೆಯಲ್ಲಿದ್ದವರು (ಅವರೂ ಲೀಲೆಯ ಕುಟುಂಬದವರೇ) ನನ್ನನ್ನು ಮಾತನಾಡಿಸಿದರು. ಆದರೆ ಅವರಿಗೆಲ್ಲ ನಾನು ಯಾರು ಎನ್ನುವುದು ಗೊತ್ತಾಗಲೇ ಇಲ್ಲ. ಇದೇನು ವಿಚಿತ್ರ! ಬಹಳ ಗೊಂದಲವಾಗಿದೆಯಲ್ಲ'' ಎಂದುಕೊಂಡಳು; ಅದನ್ನು ಸರಸ್ವತಿಯ ಬಳಿ ನಿವೇದಿಸಿಕೊಂಡಳು.

ಆಗ ಸರಸ್ವತಿ ಹೇಳುತ್ತಾಳೆ: ''ಓ ಮಗಳೇ! ಇದಕ್ಕೆಲ್ಲ 'ನಾನು ಲೀಲಾ' ಎನ್ನುವ ಅಹಂಕಾರಕ್ಕೆ ನೀನು ಇನ್ನೂ ಅಂಟಿಕೊಂಡಿರುವುದೇ ಕಾರಣ. ದ್ವೈತ ಭಾವನೆಯು ಸಂಪೂರ್ಣ ನಾಶವಾಗುವ ತನಕ ನೀನು ಈ ರಹಸ್ಯವನ್ನು ಅರ್ಥಮಾಡಿಕೊಳ್ಳಲಾರೆ.''

ಲೀಲಾ ಮತ್ತೆ ಹೇಳುತ್ತಾಳೆ: ''ಓ ದೇವಿ, ನನ್ನ ಗಂಡನು ಒಬ್ಬ ಋಷಿಯಾಗಿದ್ದನು. ನಾನು ಅವಳ ಪತ್ನಿಯಾಗಿದ್ದೆನು. ಮುಂದಿನ ಜನ್ಮದಲ್ಲಿ ಅವನು ರಾಜನಾಗಿದ್ದನು; ನಾನು ಅವನ ರಾಣಿಯಾಗಿದ್ದೆನು. ಅವನು ಈಗ ಮರಣಹೊಂದಿ, ಮತ್ತೊಬ್ಬ ರಾಜನಾಗಿ ರಾಜ್ಯಭಾರ ಮಾಡುತ್ತಿದ್ದಾನೆ. ನಿಜವಾಗಿಯೂ ಅವನು ಎಲ್ಲಿದ್ದಾನೆ? ಅವನ ಹತ್ತಿರ ದಯವಿಟ್ಟು ಕರೆದುಕೊಂಡು ಹೋಗಲಾರೆಯಾ?''

**ಸರಸ್ವತಿ:** ''ಲೀಲಾ, ನೀನು ಮತ್ತು ನಿನ್ನ ಗಂಡ ಈಗಾಗಲೇ ಹಲವಾರು ಜನ್ಮಗಳನ್ನೆತ್ತಿದ್ದೀರಿ. ಅವುಗಳಲ್ಲಿ ಮೂರು ಜನ್ಮಗಳ ಪರಿವೆ ಮಾತ್ರ ನಿನಗೆ ಇದೆ. ನಿನ್ನ ಗಂಡನಾಗಿದ್ದ ರಾಜ ಪದ್ಮನು ಪ್ರಾಪಂಚಿಕತೆಯಲ್ಲಿ ಮುಳುಗಿಹೋಗಿದ್ದನು, 'ನಾನು ದೊರೆ, ನಾನು ಸಶಕ್ತ, ನಾನು ಸುಖಿ' ಎಂದೆಲ್ಲ ಭಾವಿಸಿಕೊಂಡಿದ್ದನು. ಅದಕ್ಕಾಗಿಯೇ ಅವನು ಮುಂದಿನ ಜನ್ಮದಲ್ಲಿಯೂ ರಾಜನಾಗಿಯೇ ಹುಟ್ಟಿದ್ದಾನೆ.''

ಈಗಾಗಲೇ ಮುಂದಿನ ಜನ್ಮವನ್ನು ಅನುಭವಿಸುತ್ತಿರುವ ತನ್ನ ಗಂಡನನ್ನು ನೋಡಲು ಲೀಲೆ ಆಶೆಪಟ್ಟಳು. ಇಬ್ಬರೂ ಮತ್ತೆ ಪ್ರಯಾಣ ಬೆಳೆಸಿದರು. ನೂರಾರು ಮೈಲುಗಳನ್ನು ಕ್ರಮಿಸಿದರು.

ಈ ಸಂದರ್ಭದಲ್ಲಿ ರಾಮ ವಸಿಷ್ಠರಿಗೆ ಒಂದು ಪ್ರಶ್ನೆ ಕೇಳಿದ: ''ಪೂಜ್ಯರೆ, ಈ ಇಬ್ಬರು ಸ್ತ್ರೀಯರು ವಿಶ್ವದ ದೂರಾತಿದೂರ ನಕ್ಷತ್ರಪುಂಜಗಳನ್ನು ಕ್ರಮಿಸಿದರು ಎಂದು ಹೇಳುತ್ತೀರಿ. ಅದು ಹೇಗೆ ಸಾಧ್ಯ? ಅವರಿಗೆ ದಾರಿಯಲ್ಲಿ ಅಡೆತಡೆಗಳು ಏನೂ ಬರಲಿಲ್ಲವೆ?''

ಅದಕ್ಕೆ ವಸಿಷ್ಠರು ಹೀಗೆ ಹೇಳಿದರು: ''ಓ ರಾಮ, ಇದೇನು ಹೇಳುತ್ತಿರುವೆ? ಎಲ್ಲಿದೆ ವಿಶ್ವ? ಎಲ್ಲಿದೆ ನಕ್ಷತ್ರಪುಂಜಗಳು? ಆ ಇಬ್ಬರು ಸ್ತ್ರೀಯರು ರಾಣಿಯ ಅಂತಃಪುರದಲ್ಲಿಯೇ ಇದ್ದಾರೆ. ಬೇರೆ ಎಲ್ಲೂ ಹೋಗಿಲ್ಲ. ಹೋಗಿದ್ದರು ಎನ್ನುವುದೆಲ್ಲ ಮನೋವಿಲಾಸ ಮಾತ್ರ. ಯಾರು ಮಹಾತ್ಮನಾಗಿದ್ದಾನೆಯೋ, ಅವನು ರಾಜ ಪದ್ಮನಾಗಿದ್ದು ಇಲ್ಲೇ. ಅವನು ಮುಂದೆ ವಿದೂರಥ ಎಂಬ ಹೆಸರಿನಿಂದ ರಾಜ್ಯಭಾರ ಮಾಡುತ್ತಿರುವನು. ಅದು ನಡೆಯುತ್ತಿರುವುದೂ ಇಲ್ಲೇ. ಓ ರಾಮ, ಈ ಎಲ್ಲ ಘಟನೆಗಳ ಆಧಾರ ಶುದ್ಧ ಆಕಾಶವಲ್ಲದೆ ಬೇರೆ ಏನೂ ಅಲ್ಲ. ಶುದ್ಧ ಆಕಾಶದಲ್ಲಿ ವಿಶ್ವವೂ ಇಲ್ಲ; ದೂರದ ಕಲ್ಪನೆಯೂ ಇಲ್ಲ ಮತ್ತು ಯಾವ ಅಡೆತಡೆಗಳೂ ಇಲ್ಲ. ಹಾಗೆ ಅಂದುಕೊಳ್ಳುವುದು ಭ್ರಮೆಯೇ ಸರಿ.''

ವಸಿಷ್ಠರು ಕಥೆಯನ್ನು ಮುಂದುವರೆಸುತ್ತಿದ್ದಾರೆ: ''ಓ ರಾಮ, ಸರಸ್ವತಿ ಮತ್ತು ಲೀಲೆ ಮತ್ತೆ ತಮ್ಮ ಪ್ರಯಾಣವನ್ನು ಮುಂದುವರೆಸಿದ್ದಾರೆ. ಇಬ್ಬರೂ ಸುಂದರವಾದ ಬೆಟ್ಟವೊಂದರ ಶಿಖರದ ಮೇಲೆ ನಿಂತಿದ್ದಾರೆ. ಅಲ್ಲೊಂದು ಹಳ್ಳಿ. ಲೀಲೆ ತನ್ನ ಹಲವಾರು ಜನ್ಮಗಳಲ್ಲಿ ಒಂದನ್ನು ಇಲ್ಲಿಯೇ ಸವೆಸಿರುವುದನ್ನು ನೆನಪು ಮಾಡಿ ಕೊಂಡಳು. ಮತ್ತೆ ಅವರಿಬ್ಬರೂ ಗಗನಕ್ಕೆ ಏರಿದರು. ದೇವಲೋಕ, ಬ್ರಹ್ಮಲೋಕಗಳನ್ನೂ ದಾಟಿಹೋದರು. ಸೂರ್ಯಚಂದ್ರರೂ ಅವರಿದ್ದ ಸ್ಥಳಕ್ಕಿಂತ ಅದೆಷ್ಟೋ ಕೆಳಕ್ಕೆ ಮಬ್ಬಾಗಿ ಕಾಣಿಸುತ್ತಿದ್ದಾರೆ. ಹೀಗೆ ಹಲವಾರು ಅತೀಂದ್ರಿಯ ದೃಶ್ಯಗಳನ್ನು ಕಂಡರು. ಕಡೆಗೆ ಲೀಲೆ ತನ್ನ ಗಂಡ, ತನ್ನ ಮುಂದಿನ ಜನ್ಮದಲ್ಲಿ ರಾಜ್ಯಭಾರ ಮಾಡುತ್ತಿರುವ ನೆಲೆಯನ್ನು ಪ್ರವೇಶಿಸಿದ್ದಾಳೆ; ಅವಳೊಡನೆ ಸರಸ್ವತಿ ದೇವಿಯೂ ಇದ್ದಾಳೆ.

ಈಗ ಅವನೊಬ್ಬ ಬಹುದೊಡ್ಡ ರಾಜನಾಗಿ ಸರ್ವಮಾನ್ಯನಾಗಿದ್ದಾನೆ. ಅವನ ಹೆಸರು ವಿದೂರಥ. ಅವನ ರಾಜ್ಯದ ಮೇಲೆ ಸಿಂಧೂ ದೇಶದ ರಾಜನು ಆಕ್ರಮಣ ಮಾಡಿದ್ದಾನೆ. ವಿದೂರಥನ ಸೈನ್ಯವು ಘೋರವಾದ ಯುದ್ಧದಲ್ಲಿ ತೊಡಗಿದೆ. ಆಕಾಶದಲ್ಲಿ ನಿಂತುಕೊಂಡೇ ಇಬ್ಬರು ಸ್ತ್ರೀಯರೂ ಈ ಭಯಂಕರ ಯುದ್ಧವನ್ನು ನೋಡುತ್ತಿದ್ದಾರೆ. ಅನಂತರ ಅವರು ರಾಜನ ಅರಮನೆಯನ್ನು ಪ್ರವೇಶಿಸಿದರು. ರಾಜನು ತನ್ನ ಮಂತ್ರಿಗಳ ಜೊತೆಗೆ ಮಂತ್ರಾಲೋಚನೆಯಲ್ಲಿ ತೊಡಗಿದ್ದನು. ಅನಂತರ ನಿದ್ರಿಸಲು ತೆರಳಿದನು. ಇಬ್ಬರು ಸ್ತ್ರೀಯರೂ ಆಕಾಶಮಾರ್ಗದಲ್ಲಿ ನಿಂತುಕೊಂಡೇ ಆ ಘನಘೋರವಾದ ಯುದ್ಧವನ್ನು ವೀಕ್ಷಿಸತೊಡಗಿದರು.

ಕೆಲವು ಸಮಯದ ನಂತರ ಅವರು ರಾಜನು ಮಲಗಿದ್ದ ಕೊಠಡಿಯನ್ನು ಪ್ರವೇಶಿಸಿದರು. ದೇವಿ ಸರಸ್ವತಿಯು ತನ್ನ ದೈವೀಮಾಯೆಯಿಂದ ಸೇವಕರನ್ನೆಲ್ಲ ನಿದ್ರಾವಶರನ್ನಾಗಿ ಮಾಡಿಬಿಟ್ಟಿದ್ದಳು. ಇಬ್ಬರೂ ಎದುರಿಗಿದ್ದ ಆಸನಗಳಲ್ಲಿ ಕುಳಿತರು. ರಾಜನು ಎಚ್ಚೆತ್ತು, ಅವರಿಗೆ ನಮಸ್ಕರಿಸಿ ಪೂಜಿಸಿದನು. ಸರಸ್ವತಿಯ ಅವನ ಕುಲದ ಬಗ್ಗೆ ವಿಚಾರಿಸಿದಳು. ತಲೆಯ ಮೇಲೆ ಕೈಯಿಟ್ಟು, ಹಿಂದಿನ ಜನ್ಮಗಳ ಸ್ಮೃತಿಯನ್ನು ಪಡೆದುಕೊಳ್ಳುವಂತೆ ಅನುಗ್ರಹಿಸಿದಳು. ಒಡನೆಯೇ ರಾಜನಿಗೆ ತನ್ನ ಪೂರ್ವಜನ್ಮಗಳ ನೆನಪು ಬಂತು. ಅವನು ಉದ್ಗರಿಸಿದನು: ''ದೇವಿ, ಹಿಂದಿನ ಜನ್ಮದಲ್ಲಿ ನಾನು ಸತ್ತು ಕೇವಲ ಒಂದು ದಿನವಷ್ಟೇ

ಸಂದಿದೆ. ಆದರೆ, ಈ ಜನ್ಮದಲ್ಲಿ ನನ್ನ ಈ ದೇಹಕ್ಕೆ ಈಗಾಗಲೇ ಎಪ್ಪತ್ತು ವರ್ಷ ಕಳೆದುಹೋಗಿದೆಯಲ್ಲ, ಇದೇನಾಶ್ಚರ್ಯ!''

ಸರಸ್ವತಿ ಉತ್ತರಿಸುತ್ತಾಳೆ: ''ಅಪ್ಪಾ ವಿದೂರಥ, ನೀನು ನೋಡುತ್ತಿರುವುದು, ನೀನು ಅನುಭವಿಸುತ್ತಿರುವುದು – ಈ ಎಲ್ಲವೂ ನಿನ್ನ ಮನಸ್ಸಿನ ಕಲ್ಪನೆಯಲ್ಲದೆ ಬೇರೆ ಅಲ್ಲ. ಹಿಂದಿನ ಜನ್ಮಗಳಲ್ಲಿ 'ನಾನು ಹೀಗೆ', 'ನಾನು ಹಾಗೆ' ಎಂದು ನೀನು ಅಂದುಕೊಳ್ಳುತ್ತಿದ್ದೆ. ಈಗ 'ನಾನು ರಾಜ ವಿದೂರಥ' ಎಂದುಕೊಳ್ಳುತ್ತಿದ್ದೀಯೆ. ಹಾಗೆಯೇ 'ನಾನು ಎಲ್ಲ ದುಃಖಗಳ ಪಾರವನ್ನು ತಲುಪಿದ್ದೇನೆ. ನಾನು ಮಹದಾನಂದವನ್ನು ಅನುಭವಿಸುತ್ತಿದ್ದೇನೆ' ಎಂಬ ನಿಶ್ಚಯವನ್ನು ಮಾಡಿದಾಗ ಅದನ್ನೂ ಕಾಣುವೆ, ಅನುಭವಿಸುವೆ.

''ಮಗೂ ವಿದೂರಥ, ಈ ಜಗತ್ತು ಎನ್ನುವುದು ಒಂದು ಕನಸು ಇದ್ದಂತೆ. ನಮ್ಮ ಸ್ವಂತ ವ್ಯಕ್ತಿತ್ವ ಮತ್ತು ಇತರರು ಇದ್ದಾರೆ ಎಂಬ ಭಾವನೆ – ಇವೆಲ್ಲವೂ ಭ್ರಮೆಯಲ್ಲದೆ ಮತ್ತೇನಲ್ಲ. ನಿಜವಾಗಿ ನೋಡಿದರೆ, ನೀನು ಹುಟ್ಟಿಯೂ ಇಲ್ಲ, ಸತ್ತೂ ಇಲ್ಲ. ಹುಟ್ಟಿದ್ದರೆ ತಾನೆ ಸಾಯುವುದು! ಇವೆಲ್ಲಕ್ಕೂ ಆಧಾರವಾದ ಅನಂತ ಚೈತನ್ಯ ಮಾತ್ರವೇ ಸತ್ಯ. ಈ ಜಗತ್ತು ಮತ್ತು ಇಲ್ಲಿನ ಜೀವಿಗಳೆಲ್ಲರೂ ಒಂದು ಸುದೀರ್ಘ ಕಾಲದ ಸ್ವಪ್ನ ಮಾತ್ರ.''

ಈ ಉಪದೇಶ ಮಾಡಿದ ಸರಸ್ವತಿ ಅವನನ್ನು ಆಶೀರ್ವದಿಸಿ, ''ನಿನಗೆ ಸರ್ವ ವಿಧದಲ್ಲಿಯೂ ಮಂಗಳವುಂಟಾಗಲಿ'' ಎಂದಳು.

**ವಿದೂರಥ:** ''ದೇವಿ, ಬಹಳ ಬೇಗನೆ ನಾನು ಈ ದೇಹವನ್ನು ತ್ಯಾಗ ಮಾಡುವವನಿದ್ದೇನೆ. ಇದು ಒಂದು ಕನಸಿನ ದೇಹದಿಂದ ಇನ್ನೊಂದು ಕನಸಿನ ದೇಹಕ್ಕೆ ಹೋದ ಹಾಗೆ ಎಂದು ನಿನ್ನ ಕೃಪೆಯಿಂದ ತಿಳಿದುಬಂದಿತು. ನನ್ನೊಡನೆ ನನ್ನ ಮಂತ್ರಿಗಳು ಮತ್ತು ನನ್ನ ಮಗಳು ಕೂಡ ಹೋಗುವಂತೆ ಅನುಗ್ರಹ ಮಾಡು ದೇವಿ!'' ಸರಸ್ವತಿಯು ''ಹಾಗೆಯೇ ಆಗಲಿ'' ಎಂದು ಅನುಗ್ರಹಿಸಿದಳು.

**ಸರಸ್ವತಿ:** ''ವಿದೂರಥ, ಈ ಯುದ್ಧದಲ್ಲಿ ನಿನಗೆ ಜಯವಾಗುವುದಿಲ್ಲ. ನೀನು ಮರಣವನ್ನಪ್ಪುವೆ. ಆದರೆ ನಿನಗೆ ಸದ್ಗತಿಯುಂಟಾಗುತ್ತದೆ.''

ಇವರಿಬ್ಬರೂ ಮಾತನಾಡುತ್ತಿರುವ ಸಮಯದಲ್ಲಿಯೇ, ರಾಜದೂತನೊಬ್ಬ ಓಡೋಡಿ ಬಂದು, ಶತ್ರುಸೈನ್ಯವು ರಾಜಧಾನಿಯನ್ನು ಹೊಕ್ಕಿದೆಯೆಂದು ಅರುಹಿದನು. ಶತ್ರುಗಳು ಇಡೀ ರಾಜಧಾನಿಯ ಮೇಲೆ ಭಾರೀ ಹಲ್ಲೆ ಎಸಗಿದ್ದರು. ಇಡೀ ನಗರಕ್ಕೆ ಬೆಂಕಿ ಹಚ್ಚಿದ್ದರು. ಅಗ್ನಿಯ ಜ್ವಾಲೆಗಳು ಇಡೀ ನಗರವನ್ನು ಆವರಿಸಿದ್ದವು. ಕಿಟಕಿಗಳ ಮೂಲಕ ಈ ದಾರುಣ ದೃಶ್ಯವನ್ನು ಅವರೆಲ್ಲರೂ ನೋಡಿದರು.

ಇಡೀ ನಗರವನ್ನು ಶತ್ರುಗಳು ಲೂಟಿ ಮಾಡುತ್ತಿದ್ದರು; ವಿಜಯದ ಕೇಕೆ ಹಾಕುತ್ತಿದ್ದರು. ನಗರವಾಸಿಗಳು ಹಾಹಾಕಾರ ಮಾಡುತ್ತಿದ್ದರು. ಅವರ ಆಕ್ರಂದನ ಮುಗಿಲು ಮುಟ್ಟುತ್ತಿತ್ತು. ನೂರಾರು ಅಸ್ತ್ರಗಳು ಬೆಂಕಿಯನ್ನುಗುಳುತ್ತ ನಗರದ ಕಟ್ಟಡಗಳ ಮೇಲೆ ಬೀಳುತ್ತಿದ್ದವು. ಇಡೀ ನಗರವು ಅಗ್ನಿದೇವತೆಗೆ ಆಹುತಿಯಾಗಿತ್ತು. ಶತ್ರುಸೈನಿಕರ ದಬ್ಬಾಳಿಕೆ ಮಿತಿಮೀರಿತ್ತು. ಅವರ ದೌರ್ಜನ್ಯಕ್ಕೆ ಸಿಕ್ಕಿದ ಜನರು ತತ್ತರಿಸುತ್ತಿದ್ದರು. ಸಹಾಯ ಮಾಡಿ ಎನ್ನುವ ಕೂಗು ಎಲ್ಲೆಡೆ ಕೇಳಿಸುತ್ತಿತ್ತು. ರಾಜ್ಯಗಳು, ಚಕ್ರಾಧಿಪತ್ಯಗಳಿಗೆಲ್ಲಕ್ಕೂ ಕಡೆಗೆ ಉಂಟಾಗುವ ಗತಿ ಎಂದರೆ ಇದೇ ಅಲ್ಲವೇ?

**ಎರಡನೆಯ ಲೀಲಾ :** ಅದೇ ಸಮಯಕ್ಕೆ ರಾಜನ ರಾಣಿ ಅಲ್ಲಿಗೆ ಬಂದಳು. ''ಮಹಾರಾಜ, ನೀನೊಬ್ಬನೇ ನಮ್ಮನ್ನು ಕಾಪಾಡಲು ಸಾಧ್ಯ. ಅಂತಃಪುರದ ಸ್ತ್ರೀಯರನ್ನೆಲ್ಲ ಶತ್ರುಗಳು ಕೊಂಡೊಯ್ಯುತ್ತಿದ್ದಾರೆ'' ಎಂದು ಆತಂಕದ ದನಿಯಲ್ಲಿ ಹೇಳಿದಳು.

ರಾಜನು ತನ್ನ ನಿರ್ಧಾರವನ್ನು ಘೋಷಿಸಿದನು: ''ಓ ದೇವಿ, ನಾನೇ ರಣರಂಗಕ್ಕೆ ಹೋಗುತ್ತೇನೆ. ಶತ್ರುಗಳನ್ನು ಎದುರಿಸುತ್ತೇನೆ.''

ಅಲ್ಲಿ ಇನ್ನೊಂದು ಅಶ್ಚರ್ಯ ಕಾದಿತ್ತು. ಆ ರಾಣಿ ಲೀಲೆಯ ಪ್ರತಿರೂಪದಂತೆಯೇ ಇದ್ದಳು. ಇದನ್ನು ಕಂಡು ಲೀಲೆಗೆ ವಿಸ್ಮಯವಾಯಿತು. ಒಬ್ಬನೇ ವ್ಯಕ್ತಿ ಎರಡು ರೂಪಗಳಲ್ಲಿ ಒಂದೇ ಜಾಗದಲ್ಲಿ ಇರಲು ಸಾಧ್ಯವೇ ಎಂದು ಅವಳು ಸಂದೇಹಪಟ್ಟಳು. ಇದರ ಬಗ್ಗೆ ಸರಸ್ವತಿಯನ್ನು ಕೇಳಿದಾಗ ಅವಳು ಹೀಗೆ ಉತ್ತರವನ್ನು ನೀಡಿದಳು: ''ಓ ಲೀಲಾ, ನಾವು ನೋಡುವುದೆಲ್ಲ ಅನಂತ ಚೈತನ್ಯದ ಅಭಿವ್ಯಕ್ತಿಯಲ್ಲದೆ ಬೇರೆಯಲ್ಲ. ಹಾಗೆ ನೋಡಿದರೆ, ವಿಷಯವಸ್ತುಗಳು ಬೇರೆಯಲ್ಲ ಹಾಗೂ ವಿಷಯಿ ಅಥವಾ ನೋಡುವವನು ಬೇರೆಯಲ್ಲ. ಎಲ್ಲವೂ ಒಂದೇ ಚೈತನ್ಯದ ಬೇರೆ ಬೇರೆ ರೂಪಗಳು ಮಾತ್ರ. ನೀನು ಆ ಚೈತನ್ಯದ ಒಂದು ರೂಪವಾಗಿದ್ದರೆ, ನಿನ್ನ ಪ್ರತಿ ಕೃತಿಯೇ ಆದ ಈಕೆ ಆ ಚೈತನ್ಯದ ಇನ್ನೊಂದು ಪ್ರತಿರೂಪ, ಅಷ್ಟೆ. ಇದಕ್ಕಾಗಿ ಚಿಂತಿಸಬೇಡ.''

ಎರಡನೆಯ ಲೀಲೆ ಸರಸ್ವತಿಗೆ ಹೀಗೆಂದಳು: ''ಓ ದೇವಿ, ನಾನು ನಿನ್ನನ್ನು ಹಗಲಿರುಳೂ ಪೂಜಿಸುತ್ತಿದ್ದೆ. ನೀನು ನನಗೆ ಕನಸಿನಲ್ಲಿ ಕಾಣಿಸಿಕೊಳ್ಳುತ್ತಿದ್ದೆ, ಕೂಡ. ನನಗೆ ಒಂದು ವರವನ್ನು ದಯಪಾಲಿಸು. ನನ್ನ ಪತಿಯು ಯುದ್ಧರಂಗದಲ್ಲಿ ಮಡಿದರೆ, ಅವನೆಲ್ಲಿಗೆ ಹೋಗುವನೋ ನಾನೂ ಅಲ್ಲಿಗೆ ಹೋಗುವ ಹಾಗೆ ಅನುಗ್ರಹಿಸು.'' ಸರಸ್ವತಿ ಇದಕ್ಕೆ 'ಅಸ್ತು' ಎಂದಳು.

ಹೀಗೆ ಅವರು ಮಾತನಾಡುತ್ತಿರುವಾಗ, ರಾಜ ವಿದೂರಥನು ತನ್ನ ಶೋಭಾಯಮಾನವಾದ ರಥವನ್ನು ಹತ್ತಿ, ರಣರಂಗಕ್ಕೆ ಹೊರಟನು. ಶತ್ರುವಾದ ಸಿಂಧುರಾಜನೂ ತನ್ನ ಸಂಗಡಿಗರೊಡನೆ ತೀವ್ರವಾಗಿ ಸೆಣಸಿದನು. ವಿದೂರಥನೂ ಆ ಸವಾಲಿಗೆ ತಕ್ಕ ಹಾಗೆ ಭಾರೀ ಉತ್ಸಾಹದಿಂದಲೇ ಯುದ್ಧಮಾಡಿದನು. ಪರಸ್ಪರರ ಸೈನ್ಯಗಳಿಂದ ಬಿಟ್ಟ ಶಸ್ತ್ರಾಸ್ತ್ರಗಳು ನಭೋಮಂಡಲವನ್ನು ತುಂಬಿದವು. ಕಡೆಗೆ ಇಬ್ಬರು ರಾಜರೂ ತಮ್ಮ ತಮ್ಮ ರಥಗಳನ್ನು ಕಳೆದುಕೊಂಡು ನೆಲದ ಮೇಲೆ ನಿಂತುಕೊಂಡೇ ಯುದ್ಧಮಾಡಿದರು. ವಿದೂರಥನು ಇನ್ನೊಂದು ರಥವನ್ನು ತರಿಸಿಕೊಂಡು ಹತ್ತಲು ಹೊರಟನು. ಈ ಸಮಯವನ್ನು ಉಪಯೋಗಿಸಿಕೊಂಡು, ಸಿಂಧುರಾಜನು ಅವನನ್ನು ತನ್ನ ಬಾಣಗಳಿಂದ ಕತ್ತರಿಸಿಹಾಕಿದನು. ವಿದೂರಥನ ದೇಹ